# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಎಸ್.ಸಿ. / ಎಸ್ ಟಿ ನಂ. 23/2024**

ಪ್ರ.ವ.ಬೋ. ದಿನಾಂಕ – 29.05.2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ಚಂದ್ರಪ್ಪ ಎ. | ಪ್ರಾ.ಸಾ. | – 02 |
| ತಂದೆಯ ಹೆಸರು | – ಕದುರಪ್ಪ | ಚಾ.ಸಾ. | – 02 |
| ವಯಸ್ಸು | – 59 ವರ್ಷ | | |
| ಉದ್ಯೋಗ | – ಪಂಚಾಯತಿ ಬಿಲ್ ಕಲೆಕ್ಟರ್ | | |
| ವಾಸ ಸ್ಥಳ | – ಶಿವಪುರ, ಹೊಳಲ್ಕೆರೆ ತಾಲ್ಲೂಕು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ಸಾಕ್ಷಿಗೆ ನೋಟೀಸನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ: 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ: 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಕೊಲೆಯಾದ ವೆಂಕಟೇಶ ಇವರ ಮನೆಯ ಹತ್ತಿರ ಪೋಲಿಸರು ನನ್ನನ್ನು ಕರೆಯಿಸಿದ್ದರು. ಪೋಲಿಸರು ಅಲ್ಲಿ ಮಹಜರ ಮಾಡಿದ್ದು, ಅಲ್ಲಿ ನಾನು ಮತ್ತು ಚಾಸಾ:3 ಹಾಜರಿದ್ದು, ಮಹಜರಿಗೆ ಸಹಿ ಮಾಡಿರುತ್ತೇವೆ. ನಮ್ಮ ಊರಿನವರೇ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಅವರ ಹೆಸರು ಅಜ್ಜಯ್ಯ ಎಂದು ಇರುತ್ತದೆ. ಉಳಿದವರ ಹೆಸರು ನನಗೆ ಈಗ ನೆನಪಿಲ್ಲ. 1 ಮತ್ತು 3 ನೇ ಆರೋಪಿತರು ವೆಂಕಟೇಶನಿಗೆ ಹೊಡೆದ ಸ್ಥಳದಲ್ಲಿ ಪೋಲಿಸರು ಮೊದಲು ಮಹಜರ ಮಾಡಿರುತ್ತಾರೆ. ಆ ಸಮಯದಲ್ಲಿ ಫೋಟೊ ತೆಗೆದಿರುತ್ತಾರೆ. ಪೋಲಿಸರು ಸ್ಥಳದಿಂದ ಒಂದು ಕೋಲನ್ನು

ವಶಪಡಿಸಿಕೊಂಡಿರುತ್ತಾರೆ. ಸದರಿ ಕೋಲನ್ನು ನೋಡಿ ಗುರುತಿಸಿರುತ್ತೇನೆ. ಸಾಕ್ಷಿಗೆ ಎಂಓ:1 ನ್ನು ತೋರಿಸಲಾಗಿ, ಅದರ ಮೇಲೆ ಇರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಕೋಲನ್ನು ನೋಡಿ ಗುರುತಿಸಿದ್ದು, ಅದನ್ನು ಎಂಓ:1 ಎಂದು ಈಗಾಗಲೇ ಗುರುತಿಸಲಾಗಿದೆ.

ವೆಂಕಟೇಶನ ಮನೆಯ ಒಳಗೆ, ಹೊರಗೆ ಮಹಜರ ಮಾಡಿ ಫೋಟೊ ತೆಗೆದಿರುತ್ತಾರೆ. ಸಾಕ್ಷಿಯು 8 ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ:4 ರಿಂದ 11 ಎಂದು ಗುರುತಿಸಲಾಯಿತು. ಪೋಲಿಸರು ಎಲ್ಲ ವಿಚಾರಗಳನ್ನು ಬರೆದುಕೊಂಡಿರುತ್ತಾರೆ. ಎಲ್ಲ ವಿಚಾರ ತಿಳಿದು, ನಾನು ಸಹಿ ಮಾಡಿರುತ್ತೇನೆ. ನನ್ನ ಜೊತೆಗೆ ಚಾಸಾ:3 ರವರು ಇದ್ದು, ಅವರೂ ಸಹ ಮಹಜರಿಗೆ ಸಹಿ ಮಾಡಿರುತ್ತಾರೆ. ಚಾಸಾ:3 ನೀರು ಘಂಟಿ ಕೆಲಸ ಮಾಡುತ್ತಾರೆ.

**– ಪಾಟೀ ಸವಾಲು – ಆರೋಪಿಪರ ಶ್ರೀ ಎಂ.ಸಿ.ಟಿ. ವಕೀಲರಿಂದ –**

ನಾನು ದ್ವಿತೀಯ ಪಿಯುಸಿವರೆಗೆ ಓದಿರುತ್ತೇನೆ. ಪೋಲಿಸರು ಬೆಳಿಗ್ಗೆ 9.20 ಕ್ಕೆ ಬಂದಿದ್ದು, ಮಧ್ಯಾಹ್ನ 1.00 ಗಂಟೆಯವರೆಗೆ ಇದ್ದರು. ಮಹಜರನ್ನು ಓದಿ ಸಹಿ ಮಾಡಿರುವುದಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದ ಮೇರೆಗೆ ಸಹಿ ಹಾಕಿರುತ್ತೇನೆ. ಎಂಓ:1 ರಂತಹ ವಸ್ತುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ನಮ್ಮ ಊರಿನಲ್ಲಿ ಆಂಜನೇಯ ಸ್ವಾಮಿ ತೇರು ಯಾವಾಗ ಇತ್ತು ಎಂದು ನನಗೆ ಈಗ ನೆನಪಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರ ಮಾಡಿ, ಎಂಓ:1 ನ್ನು ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಿಪಿ:4, 5 ರಲ್ಲಿರುವ ರಸ್ತೆಯಲ್ಲಿ ದನ ಕರು ಓಡಾಡುವ ಸ್ಥಳ ಎಂದರೆ ಸರಿ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.